Reg No M. 1299 .3ri 27—9—52

36 ನೇ ವರ್ಷ — 36 th Year

ಸತ್ಯವಾದಿ
SATYAVADI

ಬಿಡಿಪ್ರತಿ 3 ಪೈ] ಸ್ಥಾಪಕರು : ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬಾಯರು

ಪಾಕಿಸ್ತಾನಕ್ಕೆ ಗೋಧಿ

ಕೆನಡಾ ಗೋಧಿ ಒಂದು ಲಕ್ಷ ಟನ್ ಪಾಕಿಸ್ತಾನಕ್ಕೆ ಬಂಲಿದೆಯೆಂದು ಕರಾಚಿ ವಾರ್ತೆ.

ಕರ್ತವ್ಯ ಲೋಪ

ಅಧ್ಯಕ್ಷ ಟ್ರೂಮ್ಯಾನರವರು ಜುನಾವಣಾ ಪ್ರಚಾರದಲ್ಲಿ ನಿರತರಾಗಿರುವದರಿಂದ ದೇಶದ ಕರ್ತವ್ಯಕ್ಕೆ ಚ್ಯುತಿ ಬರಲಪೆಯೆಂದು ವಾಷಿಂಗ್ಟನ್ ಪ್ರಜೆಯೋರ್ವರು ಮೊಕದ್ದಮೆ ಹೂಡಿದ್ದಾರೆ.

ರೇಷ್ಮೆ ಪತ್ತೆ

ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿನ ಅಂಗಡಿಯೊಂದರಲ್ಲಿ 2 ಸಾವಿರ ರೂ. ಬೆಲೆಯ ಜಪಾನ್ ರೇಷ್ಮೆ ಪತ್ತೆಯಾಗಿದೆ. ಸುಂಕವನ್ನು ಕೊಡದೆ ಇದನ್ನು ಬಚ್ಚಿಡಲಾಗಿದ್ದಿತು.

ಮುಷ್ಕರ

ಮುಂದಿನ ತಿಂಗಳು 1 ನೇ ತಾ|| ನಿಂದ ತಮ್ಮ ಬೇಡಿಕೆಗಳು ಈಡೇರಲಿಲ್ಲವಾದಪ್ರಯುಕ್ತ ಮಧ್ಯ ಪ್ರದೇಶದ ಬಟ್ಟೆಗಿರಣಿ ಕಾರ್ಮಿಕರು ಮುಷ್ಕರವನ್ನಾರಂಭಿಸಲಿರುವರು

ಕಾನೂನು ಬದ್ಧವೇ ?

ಮಧ್ಯ ಪ್ರದೇಶದ ಗಿಂಜೇ ಕೆಲಸಗಾರರು ಮುಷ್ಕರ ಕಾನೂನುಬದ್ಧವಾದುದೇ ಎಂಬುದರ ಪರಿಶೀಲನೆಯನ್ನು ಸರ್ಕಾರ ಪಂಚಾಯತಿಗೆ ಬಿಟ್ಟಿದೆ.

ಜಫರುಲ್ಲ ಹೇಳಿಕೆ

ಕರಾಚಿಯಲ್ಲಿ ಪಾಕಿಸ್ತಾನದ ವಿದೇಶ ಮಂತ್ರಿ ಜಫರುಲ್ಲ ಖಾನರು ಹೇಳಿಕೆ ಇತ್ತು. ಕಾಶ್ಮೀರದ ವಿಷಯದಲ್ಲಿ ವಿಶ್ವ ಭದ್ರತಾ ಸಂಸ್ಥೆ ಮಂದಿನ ಕ್ರಮ ತೆಗೆದುಕೊಳ್ಳಬೇಕು ಎಂದರು. ಕಾಶ್ಮೀರದ ವಿಚಾರಣೆ ವಿಷಯದಲ್ಲಿ ಜಿನೀವಾ ಸಂಮೇಳನದಲ್ಲಿ ಮಾತುಕತೆಯೇನೂ ನಡೆಯಲಿಲ್ಲವೆಂದು ಅವರು ತಿಳಿಸಿದ್ದಾರೆ.

ವಿನೋಬಾ ಭರವಸೆ

ಬೇಹಾರದ ಭೂದಾನ ಯಜ್ಞ ಶಿಬಿರದಲ್ಲಿ ಸೇರಿದ್ದ 20 ಸಾವಿರ ಜನರೆದುರು ಆಚಾರ್ಯ ವಿನೋಬ ಭಾವೆ ಮಾತನಾಡುತ್ತಾ, 1757 ರಲ್ಲಿ ಪ್ಲಾಸಿ ಕ್ರಾಂತಿ ನಡೆದಂತೆ 1857 ರಲ್ಲಿ ಸಿಪಾಯಿ ಕ್ರಾಂತಿ ನಡೆದಂತೆ 1957 ರಲ್ಲಿ ಆರ್ಥಿಕ ಸಾಮಾಜಿಕ ಕ್ರಾಂತಿಯನ್ನು ನಡೆಸುವುದಾಗಿ ತಿಳಿಸಿದ್ದಾರೆ

ಮಲೇರಿಯ

ಭಾರತದ ಜನಸಂಖ್ಯೆಯಲ್ಲಿ ಹತ್ತು ಕೋಟಿ ಮಂದಿ ಮಲೇರಿಯಾ ಪೀಡಿತರಾಗಿರುವರು.

ಪ್ರಾರಂಭ

ಈ ತಿಂಗಳು ಶ್ರೀಮನ್ಮಹಾರಾಜರು ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ವಿದ್ಯುತ್ ಫರ್ನೇಸನ್ನು ಪ್ರಾರಂಭಿಸಲಿರುವರು

ಆಗಮನ

ದಸರಾ ಉತ್ಸವದಲ್ಲಿ ಭಾಗವಹಿಸಲು ಭಾರತ ಸಚಿವ ಶ್ರೀ ಕೆ. ಸಿ. ರೆಡ್ಡಿ ನಾಳೆ ಮೈಸೂರಿಗೆ ಬರುವರು.

ಸರ್ಕಾರಿ ವಶಕ್ಕೆ

ಪಶ್ಚಿಮ ಪಂಜಾಬಿನಲ್ಲಿನ ಅಕ್ಕಿಯಲ್ಲವನ್ನೂ ಪಾಕಿಸ್ತಾನ ಸರ್ಕಾರ ವಶಪಡಿಸಿಕೊಂಡಿದೆ.

ನೆಹರು ನುಡಿ

ಬೀದರಿನಲ್ಲಿ ಅರ್ಧ ಲಕ್ಷ ಮಂದಿಗಳೆದುರು ಪಂಡಿತ ನೆಹರು ನಿನ್ನೆ ಭಾಷಣ ಮಾಡುತ್ತಾ, ದೇಶ ಸೇವೆ ಮನೋಭಾವದಿಂದ ಜನತೆ ವರ್ತಿಸಬೇಕೆಂದರು.

ದನಗಳ ಸಾವು

ಮೇವಿನ ಅಭಾವದಿಂದ ಮೈಸೂರು ಪ್ರಾಂತದಲ್ಲಿ ಒಟ್ಟು 1142 ದನಗಳು ಸತ್ತಿದೆಯೆಂದು ಬೆಂಗಳೂರಿನಿಂದ ಪ್ರಕಟವಾದ ಪತ್ರಿಕಾ ಪ್ರಕಟಣೆ ತಿಳಿಸುತ್ತದೆ.

ಪಾಕಿಸ್ತಾನದಲ್ಲಿ ಸಂಪೂರ್ಣ ಪಾನನಿರೋಧ

ಶ್ರೀ
ಸರಸ್ವತೀ ಮಂದಿರ

'ಸತ್ಯವಾದಿ' ಸಂಸ್ಥಾಪಕರ ಜ್ಞಾಪಕಾರ್ಥ, ಚಾಮರಾಜಪುರಂನಲ್ಲಿ ಲಾ ಕೋರ್ಟ್ ಎದುರು ಇರುವ ನಮ್ಮ ನಿವೇಶನದಲ್ಲಿ ಶ್ರೀ ಸರಸ್ವತೀ ಮಂದಿರ ನಿರ್ಮಿಸಿ,ಮೇಲೆ 'ಆರ್ಚ್'ನಲ್ಲಿ ಶ್ರೀ ಸರಸ್ವತೀ ಪ್ರತಿಮೆಯನ್ನು ಈ ಶುಭ ದಿವಸದಲ್ಲಿ ಸಂಸ್ಥಾಪಿಸಿರುತ್ತೇವೆ.

ಮಂದಿರದ ಪೂರ್ಣ ಕೆಲಸ ಸಧ್ಯವೇ ಮುಗಿದು ಶ್ರೀ ಸರಸ್ವತೀ ಮತ್ತು ಶ್ರೀ ಗಣೇಶ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗುವದೆಂದು ತಿಳಿಸಲು ಹರ್ಷಿಸುತ್ತೇವೆ

ಶ್ರೀ ಸರಸ್ವತೀ ಮಂದಿರ ರಾಜಧಾನಿಯಲ್ಲಿಲ್ಲದಿದ್ದರು, ವಿದ್ಯಾಧಿ ದೇವತೆ ಸಂದರ್ಶನಭಾಗ್ಯದಿಂದ ವಿದ್ಯಾಭ್ಯಾಸಿಗಳು ಅಭಿವೃದ್ಧಿ ಹೊಂದಲೆಂಬ ಆಶಯದಿಂದ ಸತ್ಯವಾದಿ ಸಂಸ್ಥಾಪಕರಾದ ನನ್ನ ಪೂಜ್ಯ ತಂದೆಯವರಿಗೆ, ನಿವೇಶನದ ಒಂದೆಡೆ ಪುಟ್ಟ ಮಂದಿರ ಕಟ್ಟಿಸುವ ಆಶಯವಿತ್ತು. ಶ್ರೀ ಎಂ. ವಿ. ಸುಬ್ಬರಾಯರ ಜೀವಿತ ಕಾಲದಲ್ಲಿ ಈ ಕಾರ್ಯ ಕೈಗೂಡದ್ದರಿಂದ, ಶ್ರೀ ಸರಸ್ವತೀ ಮಂದಿರವನ್ನ ಅವರ ಸ್ಮರಣಾರ್ಥ ನಿರ್ಮಿಸಲಾಗಿದೆ

ನಮ್ಮ ಮೇಲೆ ತುಂಬಾ ವಿಶ್ವಾಸವಿಟ್ಟಿರುವ ಮಂದಿರಕ್ಕೆ ಪ್ರತಿಮೆಗಳನ್ನು ಕೊಡುವ ಆಶ್ವಾಸನವಿತ್ತು, ಶ್ರೀ ನಾಗಲಿಂಗಸ್ವಾಮಿ ಮಠದ ಗುರುಗಳವರಾಗಿದ್ದ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರು, ಪ್ರತಿಮೆಗಳು ಪೂರ್ಣ ಸಿದ್ಧವಾಗುವದರೆಲ್ಲಿಯೇ ಶಿವೈಕ್ಯರಾದುದು ತುಂಬಾ ವ್ಯಸನಕರ ವಿಷಯ. ಆದರೆ ಬ್ರಹ್ಮರ್ಷಿ ಶ್ರೀ ಶೈವಶಿಲ್ಪ ಗುರುಕುಲದ ಡೈರೆಕ್ಟರರು, ಅವರ ಸುಪುತ್ರರೂ ಆದ ಶ್ರೀ ನಾಗೇಂದ್ರಸ್ಥಪತಿಯವರು, ಪಿತೃವಾಕ್ಯಪರಿಪಾಲನೆಯಲ್ಲಿ ಶ್ರದ್ಧಾಭಕ್ತಿಯನ್ನಿಟ್ಟು, ಪ್ರತಿಮೆಗಳನ್ನು ಕೊ

ಪಾಕಿಸ್ತಾನದ ಅದ್ಯಂತ ಸಂಪೂರ್ಣ ಪಾನ ನಿರೋಧ ಮುಂದಿನ ವರ್ಷದಿಂದ ಜಾರಿಗೆ ಬರುವದಾಗಿ ಕರಾಚಿಯಲ್ಲಿ ಸೇಂದಿ ಅಧಿಕಾರಿಗಳು ತಿಳಿಸಿರುವರು. ಪಾನ ಪ್ರತಿಬಂಧವನ್ನು ದೇಶಾದ್ಯಂತ ಜಾರಿಗೆ ತರಲು ಯೋಜನೆಯನ್ನು ಕ್ಷ ಕೊಳ್ಳಲಾಗಿದ್ದು, ಈ ಸಂಬಂಧವಾಗಿ ಕರಡು ಮಸೂದೆಯೆಂದು ಜನವರಿ ಅಥವ ಫೆಬ್ರವರಿಯಲ್ಲಿ ಪಾಕಿಸ್ತಾನ ಘಟನಾ ಸಮಿತಿ ಮುಂದೆ ಬರಲಿದೆ.

o o

× ಅಂತರರಾಷ್ಟ್ರೀಯ ಬೋರ್ಡಿನಿಂದ ಭಾರತ ತನ್ನ ಪ್ರತಿನಿಧಿಯನ್ನು ಕರೆಸುವ ತೀರ್ಮಾನಕ್ಕೆ ಬಂದಿದೆಯೆಂದು ದೆಹಲಿ ವಾರ್ತೆ.

o o

ಸನ್ಮಾನ

ಶ್ರೀ ವರಲಕ್ಷ್ಮಿ ಅಕೆಡೆವಿ ಆಸ್ ಆಫ್ ಫೈನ್ ಆರ್ಟ್ಸ್‌ನ ಮೈಸೂರು ಸಹೋದರರವರು ಶ್ರೀ ಜೆ ಬಿ. ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ನೂಂಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ 30 ನೇ ತಾ||ಸಂಜೆ 6 ಗಂಟೆಗೆ ಶ್ರೀ ರುಮಾಲೆ ಚನ್ನಒಸವಯ್ಯನವರಿಗೆ ಸನ್ಮಾನ ಸಮಾರಂಭವೇರ್ಪಡಿಸಿದ್ದಾರೆ

ಡುವದಾಗಿ ತಿಳಿಸಿ, 'ಆರ್ಚ್'ನಲ್ಲಿ ಇಡಲಾಗಿರುವ ಸುಂದರವಾದ ಪ್ರತಿಮೆಯನ್ನಿತ್ತುದಕ್ಕೆ, ಉಳಿದ ಪ್ರತಿಮೆಗಳನ್ನು ಬೇಗನೆ ಕೊಡುವದಾಗಿ ತಿಳಿಸಿರುವದಕ್ಕೆ ಕೃತಜ್ಞತೆಗಳು. ಶ್ರೀ ಸ್ಥಪತಿಗಳು ಚಿರಾಯುಗಳಾಗಿ, ಅವರ ಪಿತೃವರ್ಯರಂತೆ ಸತ್ಕೀರ್ತಿ ಪಡೆಯುಲೆಂದು ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ಅನುಕೂಲವಾದ ಹೊತ್ತಿನಲ್ಲಿ ಮಂದಿರಕ್ಕೆ ಭೇಟಿಕೊಟ್ಟು ವಾಗ್ದೇವಿ ದರ್ಶನದಿಂದ ಸಕಲ ಸನ್ಮಂಗಳ ಪಡೆಯುಬೇಕೆಂದು ಸ್ವಾಗತಿಸುತ್ತೇವೆ.

ಮೈಸೂರು ಅರಸರು, ಮಂತ್ರಿಗಳು ಸರ್ವರಿಗೂ ಶ್ರೀ ಸರಸ್ವತೀ ಮಂಗಳವುಂಟು ಮಾಡಲಿ.

ಎಂ. ಎಸ್. ಕೃಷ್ಣರಾವ್
ಸಂಪಾದಕ 'ಸತ್ಯವಾದಿ'
ತಾ|| 26—9—52

ಈ ದಿನದ ಪತ್ರಿಕೆಯೊಡನೆ ಶ್ರೀ ಸರಸ್ವತೀ ಪ್ರಸಾದ ಕಳಿಸಿದೆ. ದಯವಿಟ್ಟು ಸ್ವೀಕರಿಸಬೇಕಾಗಿ ವಿನಂತಿ.

ಭಿಕ್ಷುಕರು

ನಮ್ಮ ನಗರದಲ್ಲಿ ಭಿಕ್ಷುಕರ ಹಾವಳಿಯನ್ನು ತಪ್ಪಿಸಲು ಸರ್ಕಾರದವರು ಭಿಕ್ಷುಕರನ್ನು ಬೀದಿಗಳಲ್ಲಿ ಸಿಕ್ಕಿದ ಕಡೆ ಹಿಡಿದು ಪೋಲೀಸ್ ವ್ಯಾನಲ್ಲಿ ತುಂಬಿಕೊಂಡು ಅವರಿಗಾಗಿ ಮಾಡಿರತಕ್ಕ ವಸತಿ ಗೃಹಕ್ಕಾಗಲಿ ಅಥವಾ ನಮ್ಮ ನಾಡಿನ ಗಡಿಯಿಂದಾಚೆಗಾಗಲಿ ಸಾಗಿಸುವ ಕಾರ್ಯ ನಡೆಯುತ್ತಿದೆ. ಅದರೆ ಇವರುಗಳಲ್ಲಿ ಬಹಳ ಅಶಕ್ತರಾದವರಿಗೆ ಜೀವನಭಾರಣೆ ಇರಲು ಪೋಷಕಗೃಹ ನಿರ್ಮಾಣವಾಗಿರುತ್ತೆ. ಇದು ವೆಲ್ಲಿಚಾರಣೆಗೆ ಬಂದು ಸಮಿತಿ ಇರುತ್ತೆ ಸಮಿತಿಯು ಮೆಂಬರುಗಳೆಲ್ಲಾ ನಿಸ್ಪೃಹರಾಗಿ ಕೆಲಸ ಮಾಡಿದಲ್ಲಿ ಆ ಸಮಿತಿಯು ಉದ್ದೇಶಗಳು ನ್ಯಾಯವಾಗಿ ನಡೆದಂತಾಗುತ್ತವೆ. ಇದಕ್ಕಾಗಿ ಮಾಡತಕ್ಕ ವೆಚ್ಚವೂ ಸಹಾ ಸಾರ್ಥಕವಾದಂತಾಗತ್ತವೆ. ನಮ್ಮ ಸಮಿತಿಯು ಪ್ರೆಸಿಡೆಂಟರು ಈ ವಿಚಾರದಲ್ಲಿ ಸೂಕ್ತ ಕಾರ್ಯಭಾರವನ್ನು ಖುದ್ದಾಗಿ ಪರಾಂಬರಿಸುತ್ತಾ ಬಂದಲ್ಲಿ ಆ ವ್ಯಾಯವ್ಯಯವನ್ನು ಸದ್ವಿನಿಯೋಗ ಮಾಡಲು ಅವಕಾಶವಾಗುತ್ತದೆ

ಜನಹಿತೈಷಿ, ಎಚ್. ವೆಂಕಟರಾವ್.

ಈಜಿಪ್ಟಿನ ಮುಸ್ಲಿಂ ಸಹೋದರ ಸಂಸ್ಥೆ ರಾಜಕೀಯದಿಂದ ದೂರವಿರಲು ತೀರ್ಮಾನಿಸಿರುವುದಾಗಿ ಕೈರೋ ವಾರ್ತೆ

೦ ೦ ೦ ೦

ಮದ್ರಾಸು ಪ್ರಾಂತ್ಯಾದ್ಯಂತ ಶೇ 25 ವಿದ್ಯುತ್ ಸರಬರಾಜು ರದ್ದು ಮಾಡಲ್ಪಟ್ಟಿದೆ

೦ ೦ ೦ ೦

ಕಾರ್ಮಿಕ ವಸತಿಗಾಗಿ ಭಾರತ ಸರ್ಕಾರ ರೂ 716625 ಮಂಜೂರ್ಮಾಡಲು ನಿರ್ಧರಿಸಿದೆ

"Help! What Is This Strange Creature?"

from the daily newspaper THE WASHINGTON POST, Washington, D.C., U.S.A.

ಸಹಾಯ ಎಂಥಾ ! ಇದೆಂಥ ಅಶ್ಚರ್ಯಕರ ಪ್ರಾಣಿ ?

ಈ ವ್ಯಂಗ್ಯಚಿತ್ರ ವಾಷಿಂಗ್ಟನ್ ಪೋಸ್ಟ್‌ನಲ್ಲಿ ಪ್ರಕಟವಾಗಿದ್ದಿತು

ಉಡ್‌ಲಾಂಡ್ ಯಶಸ್ವಿ 2 ನೇ ವಾರ

— ದಸರಾ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ —

ರಾಮಜನ್ಮ Rama Janma

ಪಾತ್ರ— ನಿರೂಪರಾಜ್, ತ್ರಿಲೋಕ ಕಪೂರ್, ರಾಂಸಿಂಗ್

ಹೃದಯಂಗಮವಾದ ಪೌರಾಣೀಕ ಹಿಂದಿ ಚಿತ್ರ

ಪ್ರತಿದಿನ 3 ಪ್ರದರ್ಶನಗಳು

ಅಪೆರಾ 26-9-52 ರಿಂದ

ಕಲ್ಯಾಣಂ ಪಣ್ಣಿಪಾರ್ [ತಮಿಳು]

ಪಾತ್ರ— ಎಸ್. ಟಿ ರಾಮರಾವ್, ಜಿ. ವರಲಕ್ಷ್ಮಿ, ಸಾವಿತ್ರಿ [ದಿನ 3 ಆಟಗಳು

ರಣಜಿತ್ 26-9-52 ರಿಂದ

— ದಸರಾ ಹಬ್ಬದ ಪ್ರಯುಕ್ತ —

2½ ನೇ ಶನಿವಾರ, 28 ನೇ ಭಾನುವಾರ, 29 ನೇ ಸೋಮವಾರ 4 ಪ್ರದರ್ಶನಗಳು

1 ನೇದು ಬೆಳಿಗ್ಗೆ 10-30, 2 ನೇದು 3-30, 3 ನೇದು 6-30, 4 ನೇದು 9-30

ನೀಲಂಪೆರಿ [ಹಿಂದಿ]

ಪಾತ್ರ— ಗೀತಾಬಾಲಿ, ಸಜ್ಜನ್, ಗೋಪ್ [ದಿನ 3 ಆಟಗಳು

ಸತ್ಯವಾದಿ ದಿನಪತ್ರಿಕೆ

.... ಚಂದಾ ....

ತಿಂಗಳಿಗೆ ಆರು ಆಣೆ

For Quality Printing

L. N. Press

Sivarampet, Mysore

Edited, Printed and Published by Dharma Prachara Nirat M. S. Krishna Rao, at the Satyavadi Press, Chamarajapuram Mysore

FURNITURE for Hire & Sale

HOUSE OF

Honesty

Security

Service

for

Buyers and Sellers

— That is —

Ahmed Bros.,

Cabinet makers &

Commision Agents

New Curzon Park Road

Mysore.

Raja Cycle Mart

ರಾಜಾ ಸೈಕಲ್ ಮಾರ್ಟ್

ಜಗನ್ಮೋಹನ ಬಂಗ್ಲೆ ಬೀದಿ

ಮೈಸೂರು

ಚೆನ್ನಾಗಿರುವ ಬೈಸಿಕಲ್‌ಗಳು ಬಾಡಿಗೆಗೆ ಕೊಡಲಾಗುತ್ತದೆ

ರಿಪೇರಿ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಡಲಾಗುತ್ತೆ

ಕೆಲಸಗಳು ಬೇಗ, ಸುಲಭ ಛಾರ್ಜಿನಲ್ಲಿ ಮಾಡಿಕೊಡಲ್ಪಡುತ್ತವೆ

ಶಕ್ತಿಸುಧಾ

— ಉತ್ತಮವಾದ ಟಾನಿಕ್ —